ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2014–15 ದಿನಾಂಕ: 21–09–2015

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ / ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಕರ್ನಾಟಕದಲ್ಲಿ ರಾಗಿ ಆಧಾರಿತ ಕೃಷಿ ಮತ್ತು ಆಹಾರ ವ್ಯವಸ್ಥೆ ಸದೃಢಗೊಳಿಸುವ ಕಾರ್ಯಾಗಾರ.<br>ಮುಖ್ಯ ಅತಿಥಿಗಳು:<br>ದಿನೇಶ್ ಗುಂಡೂರಾವ್,<br>ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕ ವ್ಯವಹಾರಗಳ ಖಾತೆ ರಾಜ್ಯ ಸಚಿವರು. | 22–09–2015<br>ಮಂಗಳವಾರ<br>ಬೆಳಿಗ್ಗೆ<br>10–00 ಗಂಟೆಗೆ | ಯು.ಎ.ಎಸ್. ಅಲುಮ್ನಿ ಸಂಸ್ಥೆ, ಪಶುವೈದ್ಯ ಕಾಲೇಜು ಪಕ್ಕ, ಹೆಬ್ಬಾಳ, ಬೆಂಗಳೂರು |
| 2 | ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗದವರಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ: | 22–9–2015<br>ಮಂಗಳವಾರ<br>ಬೆಳಿಗ್ಗೆ<br>10–45 ಗಂಟೆಗೆ | ಪೊಲೀಸ್ ಪ್ರಧಾನ ಕಚೇರಿ,<br>7 ನೇ ಮಹಡಿ,<br>ನೃಪತುಂಗ ರಸ್ತೆ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

# ಪಿ.ಎಚ್.ಡಿ. ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಂಗಳೂರು, ಸೆಪ್ಟೆಂಬರ್ 21 (ಕರ್ನಾಟಕ ವಾರ್ತೆ)

ಹುಬ್ಬಳ್ಳಿಯ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ಪ್ರತಿವರ್ಷದಂತೆ ಈ ವರ್ಷವು ಪಿ.ಎಚ್.ಡಿ. ಪ್ರವೇಶಾತಿಗಾಗಿ ಅರ್ಜಿಯನ್ನು ಆಹ್ವಾನಿಸಿದ್ದು, ಪ್ರವೇಶಾತಿ ಅಧಿಸೂಚನೆ ಹಾಗೂ ಅರ್ಜಿಗಳು ಕುಲಸಚಿವರ ಕಚೇರಿ, ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ, ನವನಗರ, ಹುಬ್ಬಳ್ಳಿ – 580 025 ಯಲ್ಲಿ ಹಾಗೂ ವಿಶ್ವವಿದ್ಯಾಲಯದ ಅಂತರ್ಜಾಲ www/kslu.ac.in ರಲ್ಲಿ ದೊರೆಯಲಿವೆ. ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ವೆಬ್‌ಸೈಟ್ www/kslu.ac.in ನೋಡಬಹುದು.

ಪಲ್ಲವಿ:ಬಾಬು:ಜಿಪಿಆರ್.

# ಉದ್ಯೋಗ ಮೇಳ

ಬೆಂಗಳೂರು, ಸೆಪ್ಟೆಂಬರ್ 21 (ಕರ್ನಾಟಕ ವಾರ್ತೆ)

ಬೆಂಗಳೂರು ಉದ್ಯೋಗ ವಿನಿಮಯ ಕಚೇರಿಯು ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದಲ್ಲಿ ಸೆಪ್ಟೆಂಬರ್ 27 ರಂದು ಬೆಳಿಗ್ಗೆ 10–00 ಗಂಟೆಯಿಂದ ಸಂಜೆ 4–00 ಗಂಟೆವರೆಗೆ ಉದ್ಯೋಗ ಮೇಳವನ್ನು ಹಮ್ಮಿಕೊಂಡಿದೆ. ಉದ್ಯೋಗ ಮೇಳವು ಬೆಂಗಳೂರು ಯಲಹಂಕದ ಬಾಗಲೂರು ಕ್ರಾಸ್ ಹತ್ತಿರದ ಬಾಗಲೂರು ಮುಖ್ಯರಸ್ತೆಯ ದ್ವಾರಕ ನಗರದಲ್ಲಿರುವ ಬೃಂದಾವನ ಇಂಜೀಯರಿಂಗ್ ಕಾಲೇಜಿನಲ್ಲಿ ನಡೆಯಲಿದೆ.

ಈ ಉದ್ಯೋಗ ಮೇಳದಲ್ಲಿ ಖಾಸಗಿ ವಲಯದ ಐ.ಟಿ.ಸಿ, ವೋಲ್ವೋ, ಹೆಚ್.ಡಿ.ಎಫ್.ಸಿ., ಕೋಟಕ್ ಮಹೇಂದ್ರ, ಟಾಟಾ ಮೋಟರ್ಸ್, ಆದಿತ್ಯ ಬಿರ್ಲಾ ಮಿನಾಕ್ಸ್, ಹೆಚ್‌ಪಿಎಂಫಾಸಿಸ್, ಟಫೇ. ಇಂಡೋ ಯುಎಸ್ ಮಿಮ್, ಏರ್‌ಇಂಡಿಯಾಸ್ಯಾಟ್ಸ್, ಡಾಯಿಷ್ ಬ್ಯಾಂಕ್, ಆಕ್ಸಿಸ್ ಬ್ಯಾಂಕ್, ಬಾಟಾ ಇಂಡಿಯಾ ಲಿಮಿಟೆಡ್, ಹಿಂದುಜಾ ಗ್ಲೋಬಲ್ ಸಲ್ಯೂಷನ್ಸ್, ಯುಬಿ.ಸಿ.ಟಿ, ಜುಬಿಲಿಯಂಟ್ ಫುಡ್ಸ್, ಸೋಡೆಕ್ಸ್, ಎನ್‌ಟಿಟಿಎಫ್, ಎನ್‌ಐಐಟಿ ಇನ್ನು ಮುಂತಾದ ಹೆಸರಾಂತ ಖಾಸಗಿ ಸಂಸ್ಥೆಗಳು ಭಾಗವಹಿಸುತ್ತಿದ್ದು, ವಿವಿಧ ತಾಂತ್ರಿಕ ಹಾಗೂ ತಾಂತ್ರಿಕೇತರ ಹುದ್ದೆಗಳಿಗೆ ಸ್ಥಳದಲ್ಲೇ ನೇರವಾಗಿ ಆಯ್ಕೆ ಮಾಡಲಿದ್ದಾರೆ.

ಅಕ್ಷರಸ್ಥರು, ಎಸ್.ಎಸ್.ಎಲ್.ಸಿ. ಅನುತ್ತೀರ್ಣ/ಉತ್ತೀರ್ಣ. ಪಿ.ಯು.ಸಿ., ಐ.ಟಿ.ಐ. ಮತ್ತು ಡಿಪ್ಲೋಮಾ (ಎಲ್ಲಾ ಟ್ರೇಡ್ ಗಳು) ಮತ್ತು ಸಿ.ಎನ್.ಸಿ. ಅಪರೇಟರ್ಸ್, ಎಲ್ಲಾ ಪದವೀಧರರು, ಸ್ನಾತಕೋತ್ತರ ಪದವಿ ಹೊಂದಿದ ಹಾಗೂ ವಿಕಲಚೇತನ ಅಭ್ಯರ್ಥಿಗಳಿಗೆ ಉದ್ಯೋಗ ಅವಕಾಶಗಳು ಲಭ್ಯವಿದೆ. ಉದ್ಯೋಗಾಕಾಂಕ್ಷಿಗಳು ತಮ್ಮ ವೈಯಕ್ತಿಕ ವಿವರಗಳೊಂದಿಗೆ "ಉದ್ಯೋಗ ಮೇಳ" ದಲ್ಲಿ ಭಾಗವಹಿಸಿ ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಲು ಕೋರಲಾಗಿದೆ.

ಹೆಚ್ಚಿನ ಮಾಹಿತಿ ಹಾಗೂ ವಿವರಗಳಿಗಾಗಿ ಬೆಂಗಳೂರಿನ ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ದೂರವಾಣಿ ಸಂಖ್ಯೆ 22259351/22374582/22261184/22289668/28478423/23626678 ಗಳಿಂದ ಸಂಪರ್ಕಿಸಬಹುದು.

ಪಲ್ಲವಿ:ಬಾಬು:ಜಿಪಿಆರ್.

# ADMISSION NOTIFICATION FOR PH.D

Bangalore, September 21 (Karnataka Information)

**The Karnataka State Law University, Hubballi invites application for Ph.D admission for the year 2015-16. The application may be downloaded from KSLU website www.kslu.ac.in or may be collected from the office of Registrar, KSLU, Navanagar, Hubballi-580025. Application fee for GM Rs. 1,000/- and SC/ST/Cat-I Rs 500/. For details see the KSLU's Website www.kslu.ac.in.**

pallavi:babu/gpr

# ಕನ್ನಡ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭ

ಬೆಂಗಳೂರು, ಸೆಪ್ಟೆಂಬರ್ 21 (ಕರ್ನಾಟಕ ವಾರ್ತೆ)

ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಹೊರರಾಜ್ಯ ಆಂಧ್ರ ಪ್ರದೇಶ ಮತ್ತು ತೆಲಂಗಾಣ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಸೆಪ್ಟೆಂಬರ್ 23 ರಂದು ಬುಧವಾರ ಬೆಳಿಗ್ಗೆ 11–00 ಗಂಟೆಗೆ ಅನಂತಪುರ ಜಿಲ್ಲೆಯ ಡಿ. ಹಿರೇಹಾಳದ ನೀಲಕಂಠೇಶ್ವರ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದೆ.

ಈ ಸಮಾರಂಭದ ಉದ್ಘಾಟನೆಯನ್ನು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಡಾ. ಎಲ್. ಹನುಮಂತಯ್ಯ ಅವರು ನೆರವೇರಿಸುವರು. ಸಮಾರಂಭದ ಅಧ್ಯಕ್ಷತೆಯನ್ನು ಡಿ. ಹಿರೇಹಾಳ ಗ್ರಾಮ ಪಂಚಾಯಿತಿಯ ಸರಪಂಚರಾದ ಶ್ರೀಮತಿ ಜಿ. ಲಕ್ಷ್ಮಿದೇವಿ ಅವರು ವಹಿಸುವರು. ಬಳ್ಳಾರಿ ಜಿಲ್ಲೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕ ವೀರಣ್ಣ ಎಸ್. ಜತ್ತಿ ಅವರು ಪ್ರಶಸ್ತಿ ಪ್ರದಾನ ಮಾಡುವರು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಸಾಹಿತಿ ಡಾ. ರಂಗಾರೆಡ್ಡಿ, ಕೋಡಿರಾಮಪುರ, ವಿಧಾನ ಪರಿಷತ್ ಸದಸ್ಯ, ಮೃತ್ಯುಂಜಯ್ಯ ಸೇರಿದಂತೆ ಹಲವು ಗಣ್ಯರು ಪಾಲ್ಗೊಳ್ಳುವರು.

ಪಲ್ಲವಿ:ಬಾಬು:ಜಿಪಿಆರ್.

# ಊಹಾಪೋಹಕ್ಕೆ ಕಿವಿಗೊಡಬೇಡಿ

ಬೆಂಗಳೂರು, ಸೆಪ್ಟೆಂಬರ್ 21 (ಕರ್ನಾಟಕ ವಾರ್ತೆ)

ಸೆಪ್ಟೆಂಬರ್ 19, 2014 ರಂದು ನಡೆದ ಗೆಜೆಟೆಡ್ ಪ್ರೊಬೇಷನರ್ಸ್ ಮುಖ್ಯ ಪರೀಕ್ಷೆಯ ಪ್ರಬಂಧ ಪ್ರಶ್ನೆ ಪತ್ರಿಕೆಯಲ್ಲಿ ಬೇರೆ ವಿಷಯಗಳ ಪ್ರಶ್ನೆಗಳು/ಪ್ರಶ್ನೆ ಪತ್ರಿಕೆಗಳು ನೀಡಲ್ಪಟ್ಟಿರುತ್ತದೆ ಎಂದು ಕೆಲವು ಅಭ್ಯರ್ಥಿಗಳಿಂದ ಆಯೋಗಕ್ಕೆ ತಿಳಿದು ಬಂದಿರುತ್ತದೆ.

ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಲಾಗಿದ್ದು, ಸದರಿ ಪ್ರಶ್ನೆಗಳು/ಪ್ರಶ್ನೆ ಪತ್ರಿಕೆಗಳು ಅಧಿಕೃತ ಪ್ರಶ್ನೆಗಳಾಗಿರುವುದಿಲ್ಲ ಹಾಗೂ ಈ ಪ್ರಶ್ನೆಗಳು ಮುಂಬರುವ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳಲ್ಲಿ ಬರುವುದಿಲ್ಲವೆಂದು ಖಚಿತವಾಗಿ ಅಭ್ಯರ್ಥಿಗಳ ಮಾಹಿತಿಗಾಗಿ ತಿಳಿಸಲಾಗಿದೆ. ಆದ್ದರಿಂದ ಅಭ್ಯರ್ಥಿಗಳು ಈ ಬಗ್ಗೆ ಯಾವುದೇ ಊಹಾಪೋಹಗಳಿಗೆ ಕಿವಿಗೊಡಬಾರದೆಂದು ಹಾಗೂ ಪರೀಕ್ಷೆಯನ್ನು ಯಥಾಪ್ರಕಾರ ಈಗಾಗಲೇ ನಿಗದಿಪಡಿಸಿರುವ ವೇಳಾಪಟ್ಟಿಯಂತೆ ನಡೆಸಲಾಗುವುದೆಂದು ಹಾಗೂ ಅಭ್ಯರ್ಥಿಗಳಿಗೆ ಯಾವುದೇ ಸಂಶಯಗಳಿದ್ದಲ್ಲಿ, ಆಯೋಗಕ್ಕೆ ಲಿಖಿತ ಮನವಿಯನ್ನು ಸಲ್ಲಿಸುವಂತೆ ಸೂಚಿಸಿದೆ.

ಪಲ್ಲವಿ:ಬಾಬು:ಜಿಪಿಆರ್.

# ಕೃಷಿ ಬೆಲೆ ಆಯೋಗದ ತಾಂತ್ರಿಕ ಹುದ್ದೆ ನೇಮಕಾತಿಗೆ ಅರ್ಜಿ ಆಹ್ವಾನ

ಬೆಂಗಳೂರು, ಸೆಪ್ಟೆಂಬರ್ 21 (ಕರ್ನಾಟಕ ವಾರ್ತೆ)

ಕೃಷಿ ಬೆಲೆ ಆಯೋಗಕ್ಕೆ ಅಗತ್ಯವಿರುವ ತಾಂತ್ರಿಕ ಸಲಹೆಗಾರರ ಒಂದು ಹುದ್ದೆಯನ್ನು ಒಪ್ಪಂದದ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕೃಷಿ ಅರ್ಥಶಾಸ್ತ್ರ ಅಥವಾ ಕೃಷಿ ಮಾರುಕಟ್ಟೆ ಅಥವಾ ಕೃಷಿ ಸಂಖ್ಯಾಶಾಸ್ತ್ರ ವಿಷಯಗಳಲ್ಲಿ ಪಿ.ಹೆಚ್.ಡಿ. ಪದವಿ ಹೊಂದಿ ಕನಿಷ್ಠ 5 ವರ್ಷಗಳ ಅನುಭವ ಅಥವಾ ಸ್ನಾತಕೋತ್ತರ ಪದವಿ ಹೊಂದಿದ್ದು 10 ವರ್ಷಗಳ ಅನುಭವ, ಮುಂದುವರೆದ ಕಂಪ್ಯೂಟರ್ ಮಾಡೆಲ್‌ಗಳು/ಸಾಫ್ಟ್‌ವೇಡರ್‌ಗಳನ್ನು ಮೇಲಿನ ವಿಷಯಗಳಲ್ಲಿ ಬಳಸುವ ಜ್ಞಾನವಿರಬೇಕು.

ಅರ್ಜಿಯನ್ನು ನಿಗದಿತ ನಮೂನೆಯಲ್ಲಿ ಅಕ್ಟೋಬರ್ 17 ರೊಳಗೆ ಸಲ್ಲಿಸಬೇಕು. ಹೆಚ್ಚಿನ ವಿವರಗಳಿಗೆ ಹಾಗೂ ಅರ್ಜಿ ನಮೂನೆಗಳಿಗೆ ಕೃಷಿ ಇಲಾಖೆಯ

ಅಂತರ್ಜಾಲ http://raitamitra.kar.nic.in ದಿಂದ ಪಡೆಯಬಹುದು. ದೂರವಾಣಿ ಸಂಖ್ಯೆ 080 – 22074118.

ಪಲ್ಲವಿ:ಬಾಬು:ಜಿಪಿಆರ್.

## ಸವಿತಾ ಸಮಾಜದ ವಿದ್ಯಾರ್ಥಿಗಳಿಗೆ ಪಾರಂಪರಿಕ ಕಲೆ ತರಬೇತಿ

ಬೆಂಗಳೂರು, ಸೆಪ್ಟೆಂಬರ್ 21 (ಕರ್ನಾಟಕ ವಾರ್ತೆ)

ಹಿಂದುಳಿದ ವರ್ಗ ಮತ್ತು ಕಲ್ಯಾಣ ಇಲಾಖೆ ವತಿಯಿಂದ ಪ್ರಸಕ್ತ ಸಾಲಿಗೆ ಸವಿತಾ ಸಮಾಜದಿಂದ ವಿದ್ಯಾರ್ಥಿಗಳಿಗೆ ಪಾರಂಪರಿಕ ಕಲೆಗಳಾದ ಡೋಲು ಮತ್ತು ನಾದಸ್ವರ ಸಂಗೀತ ಕಲೆಗಳಲ್ಲಿ 4 ವರ್ಷದ ತರಬೇತಿಯನ್ನು ಉಚಿತ ಊಟ, ವಸತಿ, ಶಿಕ್ಷಣ ಮತ್ತು ತರಬೇತಿ ಭತ್ಯೆಯೊಂದಿಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಏವಹನಹಳ್ಳಿಯಲ್ಲಿ ನೀಡಲಾಗುವುದು. ಸವಿತಾ ಸಮಾಜದ ಆಸಕ್ತ ವಿದ್ಯಾರ್ಥಿಗಳು ಅರ್ಜಿ ನಮೂನೆಯನ್ನು ಆಯಾ ಜಿಲ್ಲೆಯ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಯಿಂದ ಪಡೆದು ಭರ್ತಿಮಾಡಿ ದಿನಾಂಕ 09-10-2015 ರೊಳಗಾಗಿ ಆಯಾ ಜಿಲ್ಲೆಯ ಜಿಲ್ಲಾ ಹಿಂದುಳಿದ ವರ್ಗಗಳ ಕಚೇರಿಗೆ ಸಲ್ಲಿಸಲು ತಿಳಿಸಿದೆ. ಹೆಚ್ಚಿನ ಮಾಹಿತಿಗಾಗಿ ಇಲಾಖೆ ವೆಬ್‌ಸೈಟ್ www.backwardclasses.kar.nic.in ನ್ನು ಸಂಪರ್ಕಿಸಬಹುದು.

ಪಲ್ಲವಿ:ಬಾಬು:ಜಿಪಿಆರ್.

## 3527 ಸಾಹಿತಿ ಕಲಾವಿದರಿಗೆ ಮಾಸಾಶನ ಮಂಜೂರು:
## ಪ್ರತಿ ವರ್ಷ 1000 ಕಲಾವಿದರಿಗೆ ಮಾಸಾಶನ

ಬೆಂಗಳೂರು, ಸೆಪ್ಟೆಂಬರ್ 21 (ಕರ್ನಾಟಕ ವಾರ್ತೆ)

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಕಷ್ಟ ಪರಿಸ್ಥಿತಿಯಲ್ಲಿರುವ 3527 ಸಾಹಿತಿ ಕಲಾವಿದರಿಗೆ ಮಾಹೆಯಾನ ರೂ. 1500 ರಂತೆ ತಕ್ಷಣದಿಂದ ಜಾರಿಗೆ ಬರುವಂತೆ ಮಾಸಾಶನ ಮಂಜೂರು ಮಾಡಿದೆ.

2016-17 ನೇ ಸಾಲಿನಿಂದ ಪ್ರತಿ ವರ್ಷ 400 ಜನ ಕಲಾವಿದರಿಗೆ ಬದಲಾಗಿ 1000 ಜನ ಸಾಹಿತಿ ಕಲಾವಿದರಿಗೆ ಮಾಸಾಶನ ಹೆಚ್ಚಳ ಮಾಡಿ ಮಂಜೂರಾತಿ ನೀಡಲಾಗಿದೆ. ಈ ಮಾಸಾಶನ ಮಂಜೂರಾತಿ ನೀಡಲಾಗುವ ಹೆಚ್ಚುವರಿ ರೂ. 4.90 ಕೋಟಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅನುದಾನ ವೆಚ್ಚದಲ್ಲಿ ಭರಿಸಲು ಆದೇಶದಲ್ಲಿ ತಿಳಿಸಲಾಗಿದೆ.

ಪಲ್ಲವಿ/ಬಾಬು/ಕೆಎಂ

## ಗರ್ಭಿಣಿ ಮಹಿಳೆಯರ ಮತ್ತು ಮಗುವಿನ ಆರೋಗ್ಯ ಸೇವೆಗಾಗಿ ವಾತ್ಸಲ್ಯವಾಣಿ 104 ಕ್ಕೆ ಚಾಲನೆ

ಬೆಂಗಳೂರು, ಸೆಪ್ಟೆಂಬರ್ 21 (ಕರ್ನಾಟಕ ವಾರ್ತೆ)

ಭಾರತ ದೇಶದಲ್ಲಿಯೇ ಪ್ರಪ್ರಥಮ ಬಾರಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಮೂರು ಮಾರ್ಗದ ಕಾನ್ಫರೆನ್ಸ್ ಮಾದರಿಯ ಗರ್ಭಿಣಿ ಮಹಿಳೆಯರ ಮತ್ತು ಮಗುವಿನ ಆರೋಗ್ಯವನ್ನು ಅನುಸರಣೆ ಮಾಡುವ ಸಲುವಾಗಿ ಪ್ರಾರಂಭಿಸಲಾಗಿರುವ ವಾತ್ಸಲ್ಯವಾಣಿ 104 ಸಹಾಯವಾಣಿಗೆ ಆರೋಗ್ಯ ಸಚಿವ ಯು.ಟಿ. ಖಾದರ್ ಅವರು ಇಂದು ವಿಧಾನ ಸೌಧದ ಬ್ಯಾಂಕ್ವೆಟ್‌ಹಾಲ್‌ನಲ್ಲಿ ಚಾಲನೆ ನೀಡಿದರು.

ಈ ಕಾರ್ಯಕ್ರಮವನ್ನು ಪಾರದರ್ಶಕವಾಗಿ ಮಾಡಬೇಕೆಂಬ ಉದ್ದೇಶದಿಂದ ವಾತ್ಸಲ್ಯವಾಣಿಯ ಸಲಹೆಗಾರರು ಗರ್ಭಿಣಿ ಮಹಿಳೆ, ಆಶಾ ಕಾರ್ಯಕರ್ತೆ ಹಾಗೂ ನರ್ಸ್ ಒಳಗೊಂಡಂತೆ ಮೂರು ಜನರೊಟ್ಟಿಗೆ ಕನ್‌ಫರೆನ್ಸ್ ಕರೆಯನ್ನು ಮಾಡಲಾಗುವುದು. ಇದರಿಂದ ಗರ್ಭಿಣಿ ಮಹಿಳೆ ಮತ್ತು ಆಶಾ ಕಾರ್ಯಕರ್ತೆ, ನರ್ಸ್‌ಗಳಲ್ಲಿ ಯಾವುದೇ ಗೊಂದಲಗಳು ಉಂಟಾಗುವುದಿಲ್ಲವೆಂದು ಸಚಿವರು ತಿಳಿಸಿದರು.

ತಾಯಿ ಮತ್ತು ಶಿಶುವಿನ ಮರಣ ಪ್ರಮಾಣವನ್ನು ಕಡಿಮೆ ಮಾಡುವ ಜೊತೆಗೆ ಗುಡ್ಡಗಾಡು ಪ್ರದೇಶದಲ್ಲಿರುವ ಸಮಾಜದ ಕಟ್ಟಕಡೆಯ ಫಲಾನುಭವಿಗಳಿಗೆ ಆರೋಗ್ಯ ಸೇವೆಯು ದೊರೆಯಬೇಕೆಂಬ ಉದ್ದೇಶದಿಂದ 23,000 ಆಶಾ ಕಾರ್ಯಕರ್ತೆಯರನ್ನು ಈ ಯೋಜನೆಗೆ ಬಳಸಿಕೊಳ್ಳಲಾಗುತ್ತಿದೆ ಎಂದರು.

ತಾಯಿ ಮತ್ತು ಶಿಶು ಮರಣ ಪ್ರಮಾಣದ ಸಂಖ್ಯೆಯನ್ನು ಗಣನೀಯವಾಗಿ ಕಡಿಮೆ ಮಾಡಬೇಕೆಂಬ ಉದ್ದೇಶದಿಂದ ಪ್ರಾರಂಭಿಸಲಾಗಿರುವ ವಾತ್ಸಲ್ಯವಾಣಿ ಕರೆ ಕೇಂದ್ರವು, ಎಲ್ಲಾ ಗರ್ಭಿಣಿ ಮಹಿಳೆಯರಿಗೆ ಅವರ ಪ್ರಸವಪೂರ್ವ ಹಾಗೂ ಪ್ರಸವಾನಂತರದ ಆರೈಕೆಯ ಬಗ್ಗೆ ಹಾಗೂ ಮಗುವಿನ ಆರೈಕೆಯ ಬಗ್ಗೆ ಮಾಹಿತಿ ಮತ್ತು ಮೇಲ್ವಿಚಾರಣೆ, ಅವರ ಆಹಾರ ಕ್ರಮ, ಅವರು ಪಡೆದುಕೊಳ್ಳಬೇಕಿರುವ ಲಸಿಕೆಗಳು ಮತ್ತು ಮಾಹಿತಿಯನ್ನು ಎಸ್‌ಎಂಎಸ್ ಮೂಲಕ ರವಾನಿಸಲಾಗುವುದು.

ಇದಲ್ಲದೆ ಸರ್ಕಾರದಲ್ಲಿರುವ ವಿವಿಧ ಆರೋಗ್ಯ ಕಾರ್ಯಕ್ರಮಗಳು ಮತ್ತು ಯೋಜನೆಗಳ ತಿಳುವಳಿಕೆ, ಕುಟುಂಬ ಕಲ್ಯಾಣ ವಿಧಾನಗಳನ್ನು ಅಳವಡಿಸುವಲ್ಲಿ ಅವರ ಮನವೊಲಿಸುವುದು, ಮನೆಯಲ್ಲಾಗುವ ಹೆರಿಗೆಗಳನ್ನು ತಡೆಯುವುದು, ಪ್ರಸವದ ದಿನ ಹತ್ತಿರ ಬಂದಾಗ ಆಂಬುಲೆನ್ಸ್ ಸೇವೆಯನ್ನು ಒದಗಿಸಿ ಗರ್ಭಿಣಿಯನ್ನು ಹತ್ತಿರದ ಆರೋಗ್ಯಕೇಂದ್ರಕ್ಕೆ ಸೇರಿಸುವುದು ಸೇರಿದಂತೆ ಒಟ್ಟಾರೆಯಾಗಿ ತಾಯಿ ಮತ್ತು ಮಗುವಿನ ಪೂರ್ಣ ಪ್ರಮಾಣ ಆರೋಗ್ಯ ಸೇವೆಯನ್ನು ನೀಡುವುದು ಈ ಸಹಾಯವಾಣಿಯ ಉದ್ದೇಶವಾಗಿದೆ.

ಈ ಕಾರ್ಯಕ್ರಮದ ಎಂಸಿಟಿಎಸ್‌ನಲ್ಲಿ ಒಮ್ಮೆ ಗರ್ಭಿಣಿ ಮಹಿಳೆಯ ಅಥವಾ ಮಗುವಿನ ನೋಂದಣಿಯಾದ ತಕ್ಷಣದಿಂದಲೇ ಅವರಿಗೆ ಯಾವ ಯಾವ ದಿನಾಂಕಗಳಂದು ಯಾವ ಯಾವ ಸೇವೆ ನೀಡಲಾಗುವುದು ಎಂಬ ವಿವರವನ್ನು ಗರ್ಭಿಣಿ ಮಹಿಳೆಯರಿಗೆ ಮತ್ತು ಆರೋಗ್ಯ ಕಾರ್ಯಕರ್ತರಿಗೆ ಎಸ್‌ಎಂಎಸ್ ಮಾಡಲಾಗುವುದು. ಇದರಿಂದ ಅವರ ಆರೋಗ್ಯದ ಮೇಲೆ ಸಂಪೂರ್ಣವಾಗಿ ನಿಗಾವಹಿಸಬಹುದಾಗಿದೆ.

ಈ ಕಾರ್ಯಕ್ರಮದಲ್ಲಿ ವೈದ್ಯಕೀಯ ಶಿಕ್ಷಣ ಸಚಿವ ಡಾ: ಶರಣಪ್ರಕಾಶ್ ಪಾಟೀಲ್, ವಿಧಾನ ಪರಿಷತ್ ಸದಸ್ಯರಾದ ಡಾ: ಜಯಮಾಲ, ತಾರಾ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಅತುಲ್ ಕುಮಾರ್ ತಿವಾರಿ, ಆಯುಕ್ತರಾದ ಪಿ.ಎಸ್. ವಸ್ತ್ರದ್, ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿ, ಎಂ. ಲಕ್ಷ್ಮೀನಾರಾಯಣ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ನಿರ್ದೇಶನಾಲಯದ ನಿರ್ದೇಶಕ ಡಾ: ಜಿ.ಎಂ. ವಾಮದೇವ, ರಾಷ್ಟ್ರೀಯ ಆರೋಗ್ಯ ಅಭಿಯಾನ ನಿರ್ದೇಶಕಿ ಸೌಜನ್ಯ, ಯೋಜನಾ ನಿರ್ದೇಶಕಿ ಡಾ: ರೇಣುಕಾ ಡಿ.ಎಸ್. ಸೇರಿದಂತೆ ಮತ್ತಿತರ ಗಣ್ಯ ವ್ಯಕ್ತಿಗಳು ಭಾಗವಹಿಸಿದ್ದರು.

ಮಮತ/ಪೂರ್ಣಿಮ/ಕೆಎಂ